# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ ದಿನಾಂಕ: 02.01.2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: **02.01.2021** ರಂದು ವಾರ್ಡ್ ಸಂಖ್ಯೆ 129ರ ಜನವರಿ–2021 ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹಾಜರಿದ್ದ ಸದಸ್ಯರು:–

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಬಿಬಿಎಂಪಿ ಹಾಗೂ ವಾರ್ಡ್–129ರ ನೋಡಲ್ ಅಧಿಕಾರಿಗಳು.
2. ಶ್ರೀಮತಿ ಅನಿತಾರಾಜ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ–129.
3. ಶ್ರೀ ಸತೀಶ್ ಕುಮಾರ್ ಸಿ.ಆರ್. ಸ.ಅ (ಬೃನೀಗಾ)
4. ಶ್ರೀ.ಭರತ್ ಸ.ಅ (ವಿದ್ಯುತ್)
5. ಶ್ರೀ.ಅಶೋಕ್ ಎಂ.ಆರ್ ಸಹ ಕಂದಾಯ ಅಧಿಕಾರಿ, ರಾರಾನಗರ ಉಪ ವಲಯ.
6. ಶ್ರೀ ನರಸಿಂಹ ಮೂರ್ತಿ, ಕಂದಾಯ ಮೌಲ್ಯಮಾಪಕರು, ವಾರ್ಡ್ ಸಂಖ್ಯೆ–129
7. ಶ್ರೀ ರಮೇಶಯ್ಯ, ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ–129.
8. ಶ್ರೀ ಹನುಮಂತರಾಜು, ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ–129.
9. ಶ್ರೀ.ಎಲ್.ರಂಗರಾಜು, ವಿಧಾನಸೌದ ಬಡಾವಣೆಯ ನಿವಾಸಿ
10. ಶ್ರೀ.ಈಶ್ವರಚಾರ್, ವಿಧಾನಸೌದ ಬಡಾವಣೆಯ ನಿವಾಸಿ
11. ಶ್ರೀ.ಎಸ್.ಕೆ.ಭಟ್, 14ನೇ ಬ್ಲಾಕ್ ನಾಗರಭಾವಿ 2ನೇ ಹಂತ ನಿವಾಸಿ
12. ಶ್ರೀ.ಡಿ.ವೈ.ದೇವ್ಪೂರ್, 14ನೇ ಬ್ಲಾಕ್ ನಾಗರಭಾವಿ 2ನೇ ಹಂತ ನಿವಾಸಿ
13. ಶ್ರೀ.ರಾಮಣ್ಣ ಟಿ ಅಧ್ಯಕ್ಷರು, RWA ಎನ್.ಜಿ.ಇ.ಎಫ್ ಬಡಾವಣೆ, ಮಲ್ಲತ್ತಹಳ್ಳಿ

ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

### ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದವಿಷಯಗಳು

➢ ದಿನಾಂಕ: 01.01.2021 ರಿಂದ ವಾರ್ಡ್ ವ್ಯಾಪ್ತಿಯಲ್ಲಿ ಒಣಕಸ ಮತ್ತು ಹಸಿಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುವುದೆಂದು ಸಹಾಯಕ ಕಾರ್ಯಪಾಲಕರು ಅಭಿಯಂತರರು (ಘನತ್ಯಾಜ್ಯ) ರವರು ಈ ಹಿಂದಿನ ಸಭೆಯಲ್ಲಿ ತಿಳಿಸಿರುತ್ತಾರೆ. ಆದರೆ ಒಣಕಸ ಮತ್ತು ಹಸಿಕಸ ಸಂಗ್ರಹಣೆ ಸಮರ್ಪಕವಾಗಿ ಜಾರಿಯಾಗಿರುವುದಿಲ್ಲವೆಂದು ನಾಗರೀಕರು ಅಸಮಾಧಾನ ವ್ಯಕ್ತಪಡಿಸಿದರು.

- ನಾಗರಭಾವಿ ಎನ್.ಜಿ.ಇ.ಎಫ್. ಬಡಾವಣೆಯ 4ನೇ, 5ನೇ, 6ನೇ ಮತ್ತು 7ನೇ ಅಡ್ಡರಸ್ತೆಗಳಲ್ಲಿ ಹಾಗೂ 10ನೇ ಮುಖ್ಯರಸ್ತೆಯಲ್ಲಿ ರಸ್ತೆ ಗುಡಿಸುವ ಕಾರ್ಯವು ಸರ್ಮಕವಾಗಿ ನಡೆಯುತ್ತಿಲ್ಲವೆಂದು ಎನ್.ಜಿ.ಇ.ಎಫ್. ಬಡಾವಣೆಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾದಿಕಾರಿಗಳು ದೂರಿದರು ಇದಕ್ಕೆ ಪ್ರತಿಕ್ರಯಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ಪೌರಕಾರ್ಮಿಕರ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ಪ್ರತಿ ರಸ್ತೆಯನ್ನು ಪ್ರತಿ ದಿನ ಗುಡಿಸಲು ಸಾದ್ಯವಾಗುತ್ತಿಲ್ಲವೆಂದು ಅಸಹಾಯಕತೆ ವ್ಯಕ್ತಪಡಿಸಿದರು.

- ನಾಗರಭಾವಿ ಎನ್.ಜಿ.ಇ.ಎಫ್. ಬಡಾವಣೆಯಲ್ಲಿನ ಬ್ಲಾಕ್ ಸ್ಪಾಟ್ ಪ್ರದೇಶಗಳಲ್ಲಿ ಎನ್.ಜಿ.ಇ.ಎಫ್. ಬಡಾವಣೆಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದಲೇ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದ್ದು, ಅದರಲ್ಲಿ ದಾಖಲಾಗುವ ಮಾಹಿತಿಯನ್ನು (ಕಸ ಎಸೆಯುವುದು/ಸುರಿಯುವುದರ ಬಗ್ಗೆ) ಸಂಬಂಧಿಸಿದ ಅಧಿಕಾರಿಗಳೊಂದಿಗೆ ಹಂಚಿಕೊಳ್ಳಲು ಸಂಘ ಸಿದ್ಧವಿದ್ದು ಕಸ ಎಸೆಯುವವರ/ಕಟ್ಟಡ ತ್ಯಾಜ್ಯ ಸುರಿಯುವವರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿದ್ದರು. ಇದಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರೊಂದಿಗೆ ಚರ್ಚಿಸಿ ಕಸ ಎಸೆಯುವವರಿಗೆ ದಂಡ ಅಥವಾ ಶಿಕ್ಷೆಗೆ ಒಳಪಡಿಸುವ ಬಗ್ಗೆ ಸೂಕ್ತ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

## ❖ ಕಾಮಗಾರಿ ವಿಭಾಗಕ್ಕೆಸಂಬಂಧಿಸಿದ ವಿಷಯಗಳು

- ನಾಗರಭಾವಿ ಎನ್.ಜಿ.ಇ.ಎಫ್. ಬಡಾವಣೆಯ 5ನೇ ಕ್ರಾಸ್ ಅಡ್ಡರಸ್ತೆ ಮತ್ತು 1ನೇ ಅಡ್ಡರಸ್ತೆ ತುದಿಯ ಭಾಗದಲ್ಲಿ ರಸ್ತೆ ಚರಂಡಿಯ ಮೇಲ್ಭಾಗದಲ್ಲಿ ಕವರಿಂಗ್ ಸ್ಲಾಬ್ ಅಳವಡಿಸಲು ಮನವಿ ಮಾಡಿದ ಮೇರೆಗೆ ಪ್ರತಿಕ್ರಿಯಿಸಿದ ವಾರ್ಡ್ ಸಹಾಯಕ ಅಭಿಯಂತರರು ಈ ಬಗ್ಗೆ ಪರಿಶೀಲಿಸಿ ಕವರಿಂಗ್ ಸ್ಲಾಬ್ ಅಳವಡಿಸಲು ಕ್ರಮ ವಹಿಸಲಾಗುವುದಾಗಿ ತಿಳಿಸಿದ್ದರು.
- ಎನ್.ಜಿ.ಇ.ಎಫ್. ಬಡಾವಣೆಯ ಕೆಳ ರಸ್ತೆಗಳಲ್ಲಿ ಮನೆ ಮಾಲೀಕರು ರಸ್ತೆಗೆ ಅಡ್ಡವಾಗಿ ರ್‍ಯಾಂಪ್‌ಗಳನ್ನು ನಿರ್ಮಿಸಿಕೊಂಡಿದ್ದು, ಇದರಿಂದ ಈ ರಸ್ತೆಯ ಅಗಲ ಕಿರಿದಾಗಿದ್ದು ವಾಹನ ಸವಾರರಿಗೆ ಅತೀವ ತೊಂದರೆಯಾಗುತ್ತಿದ್ದು, ಅನಧಿಕೃತವಾಗಿ ರ್‍ಯಾಂಪ್ ನಿರ್ಮಿಸಿಕೊಂಡಿರುವವರ ವಿರುದ್ಧ ಕ್ರಮ ಜರುಗಿಸಲು ಹಾಗೂ ಅನಧಿಕೃತ ರ್‍ಯಾಂಪ್‌ಗಳನ್ನು ತೆರವುಗೊಳಿಸುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿ ಈ ಬಗ್ಗೆ ಪರಿಶೀಲಿಸಿ ವಾಹನ ಸಂಚಾರಕ್ಕೆ ಅಡಚಣೆಯಾಗದ ರೀತಿ ಅನಧಿಕೃತವಾಗಿ ರ್‍ಯಾಂಪ್ ನಿರ್ಮಿಸಿದ್ದಲ್ಲಿ ರ್‍ಯಾಂಪ್ ತೆರವುಗೊಳಿಸಲು ಅಗತ್ಯ ಕ್ರಮ ವಹಿಸಲಾಗುವುದೆಂದು ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿನ ರಸ್ತೆ ಗುಂಡಿಗಳನ್ನು ಬಿಬಿಎಂಪಿ ವತಿಯಿಂದ ಸ್ಥಾಪಿಸಲಾಗಿರುವ ಬ್ಯಾಚ್ ಮಿಕ್ಸ್ ಪ್ಲಾಂಟ್‌ನಿಂದ ಡಾಂಬರು ಮಿಶ್ರಣ ಪಡೆದು ಮುಚ್ಚಲಾಗುತ್ತಿದ್ದು, ಅದರಂತೆ ದಿನಾಂಕ: 22.12.2020 ರಂದು ಒಂದು ಲೋಡ್ ಡಾಂಬರು ಮಿಶ್ರಣ ಪಡೆದು ಡಿ ಗ್ರೂಪ್ ಬಡಾವಣೆಯ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಹಾಗೂ ಮತ್ತೊಂದು ಲೋಡ್ ಡಾಂಬರ್ ಮಿಶ್ರಣಕ್ಕಾಗಿ ಮನವಿ ಸಲ್ಲಿಸಲಾಗಿದ್ದು ಡಾಂಬರು ಮಿಶ್ರಣ ಲಭ್ಯವಾಗುತ್ತಿದಂತೆ ಆದ್ಯತೆ ಮೇರೆಗೆ ಪ್ರಮುಖ ರಸ್ತೆಗಳಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮ ವಹಿಸುವುದಾಗಿ ವಾರ್ಡ್ ಅಭಿಯಂತರರು ಸಭೆಗೆ ಮಾಹಿತಿ ತಿಳಿಸಿದರು.

## ❖ ಬೃಹತ್ ನೀರುಗಾಲುವೆ ಸಂಬಂಧಿಸಿದ ವಿಷಯಗಳು

- ಹಿಂದಿನ ಸಭೆಯಲ್ಲಿ ನಾಗರಭಾವಿ ಎನ್.ಜಿ.ಇ.ಎಫ್. ಬಡಾವಣೆಯಲ್ಲಿ ಹಾದುಹೋಗುವ ಬೃಹತ್ ನೀರುಗಾಲುವೆಯ ಗೇಟ್ ಮುರಿದು ಹೋಗಿದ್ದು ದುರಸ್ಥಿ ಪಡಿಸಲು ಕೋರಿದ ಮೇರೆಗೆ ಪ್ರತಿಕ್ರಿಯಿಸಿದ ಸಹಾಯಕ ಅಭಿಯಂತರರು (ಬೃನೀ.ಗಾ) ಒಂದು ವಾರದ ಒಳಗಾಗಿ ಗೇಟ್ ಸರಿಪಡಿಸುವುದಾಗಿ ಸಭೆಗೆ ತಿಳಿಸಿದರು.

- ಎನ್.ಜಿ.ಇ.ಎಫ್. ಬಡಾವಣೆಯ 10ನೇ ಅಡ್ಡರಸ್ತೆಯ ಬಳಿ ಬೃಹತ್ ನೀರುಗಾಲುವೆಯ ಕಾಮಗಾರಿಯು ಅಪೂರ್ಣಗೊಂಡಿದ್ದು, ನೀರುಗಾಲುವೆಯ ಕಾಂಕ್ರೀಟ್ ಗೋಡೆಯ ಪಕ್ಕದಲ್ಲಿ ಭೂ ಭರ್ತಿ (Land fill) ಮಾಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಅಭಿಯಂತರರು (ಬೃನೀ.ಗಾ) ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು ಆದ್ಯತೆಯ ಮೇರೆಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ವಹಿಸುವುದಾಗಿ ತಿಳಿಸಿದರು.
- ರೈಲ್ವೇ ಬಡಾವಣೆಯ ಬೃಹತ್ ನೀರುಗಾಲುವೆ ಅಕ್ಕಪಕ್ಕದಲ್ಲಿ ಬೆಳೆದಿದ್ದ ದಟ್ಟವಾದ ಗಿಡಗಂಟಿಗಳನ್ನು ತೆರವುಗೊಳಿಸುವಂತೆ ಹಿಂದಿನ ಸಭೆಯಲ್ಲಿ ಕೋರಲಾಗಿದ್ದು ಅದರಂತೆ ಬೃಹತ್ ನೀರುಗಾಲುವೆ ವಿಭಾಗದ ಅಧಿಕಾರಿಗಳು ಗಿಡಗಂಟಿಗಳನ್ನು ತೆರವುಗೊಳಿಸಿರುತ್ತಾರೆ. ಅದಕ್ಕಾಗಿ ನಾಗರೀಕರು ಬೃಹತ್ ನೀರುಗಾಲುವೆ ಅಧಿಕಾರಿಗಳಿಗೆ ಅಭಿನಂದನೆಗಳನ್ನು ತಿಳಿಸದರು.

## ❖ ಕಂದಾಯ ಇಲಾಖೆಗೆ ಸಂಬಂಧಿಸಿದ ವಿಷಯಗಳು

- ನಾಗರಬಾವಿ ಎನ್‌ಜಿಇಎಫ್ ಬಡಾವಣೆಯಲ್ಲಿನ ಖಾಲಿ ನಿವೇಶನಗಳಲ್ಲಿ ಕಸವನ್ನು ಎಸೆಯುತ್ತಿದ್ದು ಸ್ವಚ್ಛತೆಯನ್ನು ಕಾಪಾಡುತ್ತಿಲ್ಲ ಆದ್ದರಿಂದ ಅಂತಹ ಖಾಲಿ ನಿವೇಶನಗಳ ಮಾಲೀಕರ ವಿವರಗಳನ್ನು ಒದಗಿಸಿದಲ್ಲಿ ಮಾಲೀಕರಿಗೆ ತಮ್ಮ ತಮ್ಮ ನಿವೆಸನಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ತಿಳಿಸಲು ಅನುಕೂಲವಾಗುತ್ತದೆಯೆಂದು ನಾಗರೀಕರು ತಿಳಿಸದ ಮೇರೆಗೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಸಹಕಂದಾಯ ಅಧಿಕಾರಿಗಳಿಗೆ ಖಾಲಿ ನಿವೇಶನಗಳ ಮಾಲೀಕರ ವಿವರಗಳನ್ನು ಸಭೆಗೆ ಒದಗಿಸಲು ಸೂಚಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಹ ಕಂದಾಯ ಅಧಿಕಾರಿಗಳು ಯಾವ ಯಾವ ನಿವೇಶನದ ಮಾಲೀಕರ ವಿವರಗಳು ಬೇಕೆಂಬುದರ ಬಗ್ಗೆ ಮಾಹಿತಿ ಒದಗಿಸಿದ್ದಲ್ಲಿ ಕಂದಾಯ ದಾಖಲೆಗಳನ್ನು ಪರಿಶೀಲಿಸಿ ಮಾಲೀಕರ ವಿವರಗಳನ್ನು ಒದಗಿಸಲು ಅಗತ್ಯ ಕ್ರಮ ವಹಿಸುವುದಾಗಿ ತಿಳಿಸಿದರು.

ಸಹಾಯ ಆ್ಯಪ್‌ನಲ್ಲಿ ದಾಖಲಾಗುವ ಆನ್‌ಲೈನ್ ದೂರುಗಳ ಬಗ್ಗೆ ಆದ್ಯತೆಯ ಮೇರೆಗೆ ತುರ್ತಾಗಿ ಕ್ರಮ ವಹಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ), ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿ ನಗರ ಉಪ ವಿಭಾಗರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸೂಚಿಸಿದರು ಹಾಗೂ ಸದರಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

ವಂದನೆಗಳೊಂದಿಗೆ,

Deekshe

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129.

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129.

**ಪ್ರತಿಯನ್ನು:-**

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ನೋಡಲ್ ಅಧಿಕಾರಿಗಳು, ವಾರ್ಡ್-129 ರವರ ಮಾಹಿತಿಗಾಗಿ
3. ಜಂಟಿ ಆಯುಕ್ತರು, ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯ ರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ ಮಾಹಿತಿಗಾಗಿ
8. ಕಛೇರಿ ಪ್ರತಿ.